# ಪ್ರಕಟಣೆಯ ಕೃಪೆಗಾಗಿ

**ದಿನಾಂಕ: 17–12–2019**

## ಬಾಗಲಕೋಟೆ ಜಿಲ್ಲೆಯಲ್ಲಿನ ಪ್ರವಾಹಪೀಡಿತ ಪ್ರದೇಶಗಳಲ್ಲಿ ಮಕ್ಕಳು ಹಾಗೂ ಸಮುದಾಯದವರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಶೀಘ್ರವಾಗಿ ಕ್ರಮಕ್ಕಾಗಿ ಹಕ್ಕೊತ್ತಾಯ

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್, ಬರ್ಡ್ಸ್ ಸಂಸ್ಥೆ ಹಾಗೂ ರೀಚ್ ಸಂಸ್ಥೆಗಳು ಬಾಗಲಕೋಟೆ ಜಿಲ್ಲೆಯ ವಿವಿಧ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯಲು, ಬದಿಗೊತ್ತಲ್ಪಟ್ಟ ವರ್ಗದವರ ಸಶಕ್ತತೆ, ಗ್ರಾಮ ಸಭೆಯ ಸಬಲೀಕರಣ, ಸ್ಥಳೀಯ ಸರ್ಕಾರಗಳ ಸ್ವಾಯತ್ತತೆಗಾಗಿ ಬೇರೆ ಬೇರೆ ಆಯಾಮಗಳನ್ನು ಕೇಂದ್ರೀಕರಿಸಿ, ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇತ್ತೀಚೆಗೆ ಪ್ರಮುಖವಾಗಿ ಭೀಕರ ಪ್ರವಾಹವನ್ನು ಎದುರಿಸಿದ ಬಾಗಲಕೋಟೆ ಜಿಲ್ಲೆಯ ವಿವಿಧ ಗ್ರಾಮಗಳ ಮಕ್ಕಳು, ಸಮುದಾಯದವರೊಂದಿಗೆ ಚರ್ಚಿಸಿ ಅವರ ಪ್ರಸ್ತುತ ಪರಿಸ್ಥಿತಿ, ಪ್ರವಾಹದಿಂದಾಗಿ ಮಕ್ಕಳ, ಸಮುದಾಯದವರ ಮೇಲುಂಟಾಗಿರುವ ಪರಿಣಾಮಗಳ ಅವಲೋಕನ ನಡೆಸಲಾಯಿತು.

ಸುಮಾರು 4 ದಶಕಗಳಿಂದ ಮಕ್ಕಳ ಹಕ್ಕುಗಳ ವಿಷಯದಲ್ಲಿ ಕಾರ್ಯನಿರ್ವಹಿಸುತ್ತಾ 3 ಬಾರಿ ಮಕ್ಕಳ ಹಕ್ಕುಗಳ ಕೆಲಸಕ್ಕಾಗಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ನಾಮ ನಿರ್ದೇಶನಗೊಂಡ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯು ಬಾಗಲಕೋಟೆ ಜಿಲ್ಲೆಯ ವಿವಿಧ ತಾಲೂಕುಗಳಾದ ಮುಧೋಳ, ಹುನಗುಂದ ಮತ್ತು ಬಾದಾಮಿಯ ವಿವಿಧ ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಉಂಟಾಗಿದ್ದ ಭೀಕರ ಪ್ರವಾಹದ ಪರಿಣಾಮದ ಅಧಯಯನ ನಡೆಸಿದೆ. ಪ್ರಮುಖವಾಗಿ, ಪ್ರವಾಹಕ್ಕೆ ಈಡಾಗಿದ್ದ ಪ್ರದೇಶಗಳ ಭೇಟಿ, ಸಂಕಷ್ಟಕ್ಕೊಳಗಾದ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಮತ್ತು ಸಮುದಾಯದವರೊಂದಿಗೆ ಮಾತುಕತೆ ನಡೆಸಿ ಅವರು ಅನುಭವಿಸಿದ ಕಷ್ಟಗಳು ಹಾಗೂ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಅಲ್ಲದೇ ಗ್ರಾಮ ಪಂಚಾಯತ್‌ಗಳಿಗೂ ಭೇಟಿ ನೀಡಿ ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಯಿತು. ಈ ಅಧ್ಯಯನದ ಸಮಯದಲ್ಲಿ ಕಂಡುಬಂದಹ ಪ್ರಮುಖ ಅಂಶಗಳನ್ನು ವಿವಿಧ ಹಂತದ ಸರ್ಕಾರದ ಮುಂದೆ ಮಂಡಿಸಿ, ಸೂಕ್ತ ಪರಿಹಾರಕ್ಕಾಗಿ ಆಗ್ರಹಿಸುವ ಪ್ರಯತ್ನ ಇದಾಗಿದೆ.

ಹುನಗುಂದ ತಾಲೂಕಿನ ಹಿರೇಮಾಗಿ, ಕೂಡಲ ಸಂಗಮ, ಬಾದಾಮಿ ತಾಲೂಕಿನ ಪಟ್ಟದಕಲ್ಲು ಹಾಗೂ ಐಹೊಳೆ, ಮುಧೋಳ ತಾಲೂಕಿನ ಒಂಟಗೋಡಿ ಮತ್ತು ಗುಲಗಾಲ ಜಂಬಗಿಯ ಮಕ್ಕಳು ಮತ್ತು ಸಮುದಾಯದವರು ತಮ್ಮ ಅವರ ಹಕ್ಕೊತ್ತಾಯಗಳನ್ನು ಮಂಡಿಸಿ ಸರ್ಕಾರದಿಂದ ತುರ್ತು ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿದಾರೆ.

ಈ ಪ್ರವಾಹಪೀಡಿತ ಪ್ರದೇಶಗಳಲ್ಲಿ ನಡೆಸಿದ ಅಧ್ಯಯನದ ಸಮಯದಲ್ಲಿ ಗಮನಿಸಿದ ಅಂಶಗಳು, ಮಕ್ಕಳು ಮತ್ತು ಸಮುದಾಯದವರ ಅಭಿಪ್ರಾಯ, ಗ್ರಾಮ ಪಂಚಾಯತ್‌ಗಳು ನೀಡಿದ ಮಾಹಿತಿಯನ್ನು ಆಧರಿಸಿ ಪ್ರಮುಖವಾಗಿ 5 ವಿಭಾಗಗಳಲ್ಲಿ ಸಮಸ್ಯೆಗಳನ್ನು ವಿಂಗಡಿಸಲಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಕೈಗೊಳ್ಳಬೇಕಾದ ಮುಂದಿನ ಕ್ರಮಗಳೇನು ಎಂಬುದರ ಸಾರಾಂಶವನ್ನು ಸೂಚಿಸಲಾಗಿದೆ. ಅಲ್ಲದೇ ಪ್ರಸ್ತುತ ಪರಿಸ್ಥಿತಿಯಲ್ಲಿ ಉಲ್ಲಂಘನೆಯಾಗುತ್ತಿರುವ ಕಾಯಿದೆಗಳು, ನೀತಿಗಳು, ಮಾರ್ಗದರ್ಶಿಗಳು ಯಾವವು ಎಂಬುದನ್ನೂ ಸಹ ಗುರುತಿಲಾಗಿದೆ. ಈ ಕಾಯಿದೆ, ನೀತಿ ಮಾರ್ಗದರ್ಶಿಗಳ ಸಾರವನ್ನು ಅರ್ಥೈಸಿಕೊಂಡು, ಒಂದಕ್ಕೊಂದನ್ನು ಸಮರ್ಪಕವಾಗಿ, ಪೂರಕವಾಗಿ ಅನುಷ್ಠಾನಗೊಳಿಸುವತ್ತ ಸೂಕ್ತ ಕ್ರಮ ಕೈಗೊಂಡರೆ, ಪರಿಣಾಮಕಾರಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯ.

### *ಪ್ರಮುಖ ಸಮಸ್ಯೆಗಳು ಮತ್ತು ಕೈಗೊಳ್ಳಬೇಕಾದ ಪರಿಹಾರ ಕ್ರಮಗಳು:*

**ವಾಸ್ತವ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು:**

- ವಸತಿಗೆ ಸಂಬಂಧಿಸಿದಂತೆ ನಡೆಸಿದ ಸಮೀಕ್ಷೆಗಳು ಪಾರದರ್ಶಕವಾಗಿಲ್ಲ, ಹಾಗೂ ಸಮರ್ಪಕವಾಗಿಲ್ಲ. ಹಾನಿಯ ಪ್ರಮಾಣಕ್ಕನುಗುಣವಾಗಿ ಮಾಡಿದ ಎ, ಬಿ ಹಾಗೂ ಸಿ ವರ್ಗೀಕರಣವು ಹಲವಾರು ಲೋಪದೋಷಗಳನ್ನು ಒಳಗೊಂಡಿದೆ. ಅಲ್ಲದೇ ಹಾನಿಗೀಡಾದ ಅನೇಕ ಮನೆಗಳು ಈ ವರ್ಗೀಕರಣದ ಪಟ್ಟಿಯಿಂದ ಹೊರಗುಳಿದಿವೆ.
- ಪ್ರವಾಹದ ಸಮಯದಲ್ಲಿ ಹಲವಾರು ದಿನಗಳು ನೀರಿನಲ್ಲಿಯೇ ಮುಳುಗಿದ್ದರೂ ಭೌತಿಕವಾಗಿ ನಾಶವಾಗದೇ ಹಾಗೇ ಉಳಿದು, ಈಗ ಅದರ ದುಷ್ಪರಿಣಾಮ ಎದುರಿಸಿ, ಅಲ್ಲಲ್ಲಿ ಬಿರುಕು ಬಿಡುತ್ತಿರುವ, ಕುಸಿಯುತ್ತಿರುವ ಮನೆಗಳು ಯಾವುದೇ ವರ್ಗೀಕರಣದ ಭಾಗವಾಗಿಲ್ಲ.
- ನೆರೆಯಿಂದಾಗಿ ಮನೆ ಕಳೆದುಕೊಂಡವರಿಗೆ ಉಳಿದುಕೊಳ್ಳಲು ಇನ್ನೂ ಸೂಕ್ತ ನೆಲೆ ಸಿಕ್ಕಿಲ್ಲ. ತಾತ್ಕಾಲಿಕ ಶೆಡ್‌ಗಳಲ್ಲಿಯೇ ಇನ್ನೂ ನೂರಾರು ಕುಟುಂಬಗಳು ಜೀವನ ನಡೆಸುತ್ತಿವೆ.
- ಮುಳುಗಡೆಯ ಪ್ರದೇಶ, ವಿಶ್ವ ಪರಂಪರೆಯ ತಾಣವೆಂದು ಘೋಷಿಸಲಾದ ಪ್ರದೇಶಗಳಲ್ಲಿ ಸಮರ್ಪಕವಾದ ನ್ಯಾಯಯುತ ಸ್ಥಳಾಂತರಗಳು ನಡೆದಿಲ್ಲ. ಬಾಡಿಗೆ ಮನೆಗಳಲ್ಲಿ ವಾಸವಾಗಿರುವವರಿಗೆ ಮನೆಯಲ್ಲಿರುವ ಎಲ್ಲಾ ವಸ್ತುಗಳಿಗೆ ಹಾನಿಗೀಡಾದರೂ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ.

**ಶಿಫಾರಸ್ಸುಗಳು:**

- ಈಗಾಗಲೇ ನೀಡಿರುವ ಆಶ್ರಯ ಮನೆಗಳ ಗುಣಮಟ್ಟ ಪರಿಶೀಲಿಸಿ, ಅವರಿಗೆ ಶೀಘ್ರದಲ್ಲಿ ಸೂಕ್ತ ಪರಿಹಾರ ನೀಡಬೇಕು. ಅಂತಹ ಮನೆಗಳಲ್ಲಿ ವಾಸಿಸಿ, ಮುಂದೊಂದು ದಿನ ಇನ್ನೊಂದು ಅವಘಡ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು.
- ವಿಶ್ವಪರಂಪರೆ ತಾಣವೆಂದು ಪರಿಗಣಿಸಿ, ಇಡೀ ಸಮುದಾಯದವರನ್ನು ಸ್ಥಳಾಂತರಿಸುವ ಆದೇಶವಿರುವಂತಹ ಪ್ರದೇಶಗಳಲ್ಲಿ, ತಕ್ಷಣಕ್ಕೆ ಜಾಗ ಗುರುತಿಸಿ, ಸಮುದಾಯದವರಿಗೆ ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಳ್ಳಬೇಕು.
- ಸಮೀಕ್ಷೆಯಲ್ಲಿ ಆಗಿರುವ ಲೋಪದೋಷಗಳನ್ನು ತಕ್ಷಣವೇ ಗುರುತಿಸಿ, ಸರಿಪಡಿಸಿ ನಿಜವಾಗಿಯೂ ಸಮಸ್ಯೆ ಅನುಭವಿಸುತ್ತಿರುವವರಿಗೆ ಪರಿಹಾರ ನೀಡುವಂತಾಗಬೇಕು.
- ನೆರೆ ಪರಿಹಾರ ನೀಡುವಲ್ಲಿ, ಯಾವುದೇ ಕಾರಣಕ್ಕೂ ಒಳ ರಾಜಕೀಯ, ತಾರತಮ್ಯ ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಇಂತಹ ಸಮಸ್ಯೆ ಉಂಟಾದಲ್ಲಿ ಪುನರ್‌ಪರಿಶೀಲನೆ ನಡೆಸಿ, ನಿಜವಾದ ಸಂತ್ರಸ್ಥರಿಗೆ ಪರಿಹಾರ ನೀಡುವಂತಾಗಬೇಕು.

**ಹೊಲ–ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು:**

- ಹಲವರು ಬೇರೆಯವರ ಕೃಷಿ ಭೂಮಿಯಲ್ಲಿ ಸ್ವಂತ ಖರ್ಚಿನಿಂದ ಕೃಷಿ ಮಾಡುತ್ತಿದ್ದು, ಬೀಜ ಬಿತ್ತನೆ, ಉಳುಮೆ, ನೀರಾವರಿ ಪ್ರತಿಯೊಂದೂ ಕೃಷಿ ಮಾಡುವವರ ಖರ್ಚಿನಲ್ಲಿಯೇ ನಡೆದಿತ್ತು. ಆದರೆ ಈ ಪ್ರವಾಹದಿಂದಾಗಿ ಎಲ್ಲಾ ಕೃಷಿಯೂ ನೆರೆಯಲ್ಲಿ ಕೊಚ್ಚಿ ಹೋಗಿದೆ ಅಥವಾ ಹಾಳಾಗಿದೆ. ಇಂತಹ ಕೃಷಿಕರಿಗೆ ಕೃಷಿ ಭೂಮಿ ಅವರ ಹೆಸರಿನಲ್ಲಿ ಇರುವುದಿಲ್ಲವಾದ್ದರಿಂದ ಯಾವುದೇ ರೀತಿಯ ಪರಿಹಾರ ಸಿಗುವ ಸಾಧ್ಯತೆ ಇಲ್ಲ. ಇದರಿಂದಾಗಿ ಅಂತಹ ವರ್ಗದ ಜನರು ಅಕ್ಷರಶಃ ಬೀದಿಗೆ ಬಂದಿದ್ದಾರೆ.
- ಸಾವಿರಾರು ಎಕರೆಗಳಷ್ಟು ಕೃಷಿಭೂಮಿಗಳು ಸಂಪೂರ್ಣ ನಾಶವಾಗಿವೆ. ಈ ಬಾರಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಬೆಳೆಯ ಪ್ರಮಾಣ ಉತ್ತಮವಾಗಿತ್ತು. ಆದರೆ, ಕೊಯ್ಲಿಗೆ ಬರುವ ಮೊದಲೇ ಬಂದ ಪ್ರವಾಹವು ಎಲ್ಲಾ ಬೆಳೆಗಳನ್ನು ನಾಶಪಡಿಸಿತು. ಒಳ್ಳೆಯ ಬೆಳೆ ಬಂದಿದೆ, ಉತ್ತಮ ಬೆಲೆಗೆ ಮಾರಾಟ ಮಾಡಬಹುದು ಎಂದು ಆಲೋಚಿಸಿದ್ದ ಕೃಷಿಕರು ಇದರಿಂದಾಗಿ ಹತಾಶರಾಗಿದ್ದಾರೆ.
- ಕೃಷಿಗೆ ಆಗಿರುವ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ ಈವರೆಗೆ ಯಾವುದೇ ಮಾಹಿತಿ ಸಮುದಾಯದವರಿಗೆ ಸಿಕ್ಕಿಲ್ಲ. ಈ ಬಗ್ಗೆ ಸಮೀಕ್ಷೆಯೂ ಸರಿಯಾಗಿ ನಡೆದಿಲ್ಲ.
- ಬೆಳೆ ಹಾನಿಯಾಗಿರುವುದಕ್ಕೆ ಸ್ವಲ್ಪ ಪ್ರಮಾಣದ ಪರಿಹಾರ ಸಿಗಬಹುದು. ಆದರೆ ಕೃಷಿ ಭೂಮಿಯೇ ನಾಶವಾಗಿದ್ದಕ್ಕೆ ಯಾವುದೇ ಪರಿಹಾರ ಸಿಗುವ ಬಗ್ಗೆ ಮಾಹಿತಿ ಇಲ್ಲ.
- ಎಷ್ಟೋ ಕಡೆಗಳಲ್ಲಿ ಕೃಷಿ ಭೂಮಿ ಪುನರ್ ಉಪಯೋಗಕ್ಕೆ ಬಾರದ ರೀತಿಯಲ್ಲಿ ನಾಶವಾಗಿವೆ.

**ಶಿಫಾರಸ್ಸುಗಳು:**

- ಬೆಳೆ ನಾಶವಾಗಿರುವ ಕೃಷಿಕರಿಗೆ ತಕ್ಷಣ ಸಮೀಕ್ಷೆ ನಡೆಸಿ, ಸೂಕ್ತ ಪರಿಹಾರ ನೀಡುವಂತಾಗಬೇಕು.
- ಕೃಷಿ ಭೂಮಿ ನಾಶವಾಗಿದ್ದಲ್ಲಿ, ಭೂಮಿಯ ಪರಿಸ್ಥಿತಿಯ ಅವಲೋಕನ ನಡೆಸಿ, ಅದಕ್ಕೆ ಸೂಕ್ತ ಪರಿಹಾರ ನೀಡುವಂತಾಗಬೇಕು.
- ಉಪಯೋಗಕ್ಕೆ ಬಾರದಂತಹ ಪರಿಸ್ಥಿತಿಯಲ್ಲಿ ನಾಶವಾದ ಕೃಷಿ ಭೂಮಿಗೆ ಪರ್ಯಾಯ ಭೂಮಿ ನೀಡುವಂತಾಗಬೇಕು.
- ನರೇಗಾ ಕಾರ್ಯಕ್ರಮದಡಿಯಲ್ಲಿ ಕೃಷಿ ಭೂಮಿ ಅಭಿವೃದ್ಧಿಗೆ ಅವಕಾಶ ನೀಡಬೇಕು.

**ಸೌಕರ್ಯಗಳು, ವ್ಯವಸ್ಥೆ ಹಾಗೂ ಸೇವೆಗಳು:**

- ಒಂಟಗೋಡಿಯಲ್ಲಿ ಹಾನಿಗೀಡಾಗಿರುವ ಶಾಲೆ ಪುನರ್‌ನಿರ್ಮಾಣದ ಹಂತದಲ್ಲಿದೆ. ತಾತ್ಕಾಲಿಕ ಶೆಡ್‌ಗಳಲ್ಲಿ ಶಾಲೆ ನಡೆಯುತ್ತಿದೆ. ತಗಡಿನಿಂದ ಮಾಡಿದ ಶೆಡ್‌ಗಳಲ್ಲಿ ಅತಿಯಾದ ಬಿಸಿಲಿನ ಝಳವಿರುವುದರಿಂದ ದಿನನಿತ್ಯ ಮಕ್ಕಳು ಅದರಲ್ಲಿ ಕುಳಿತು ಪಾಠ ಕೇಳುವ ಪರಿಸ್ಥಿತಿ ಇದೆ.
- ತಾತ್ಕಾಲಿಕ ಶಾಲೆ ಹಾಗೂ ಮನೆಯ ಹತ್ತಿರ ಶೌಚಾಲಯವಿಲ್ಲ. ಬಯಲು ಶೌಚವೇ ದಾರಿ. ತಾತ್ಕಾಲಿಕ ಮನೆಗಳ ಹತ್ತಿರ ಕಾಡು ಇದೆ. ಎಲ್ಲರೂ ಶೌಚಕ್ಕೆ ಅಲ್ಲಿಯೇ ಹೋಗುತ್ತಾರೆ. ನೀರಿನ ಅತಿಯಾದ ಸಮಸ್ಯೆ ಈ ಪ್ರದೇಶದಲ್ಲಿದೆ.
- ತಾತ್ಕಾಲಿಕ ಮನೆಗಳಿರುವ ಕಡೆ ಸ್ನಾನದ ಮನೆಗಳೂ ಇಲ್ಲದಿರುವುದರಿಂದ ಹೆಣ್ಣುಮಕ್ಕಳು ಹಾಗೂ ಮಹಿಳೆಯರು ಸೀರೆ, ಬಟ್ಟೆಗಳಿಂದ ಮರೆಯಾಗುವಂತೆ ಸ್ನಾನದ ಮನೆ ಮಾಡಿಕೊಂಡಿದ್ದಾರೆ. ಅಲ್ಲಿಯೇ ಒಬ್ಬರು ಹೊರಗೆ ಕಾದು ನಿಂತು ಇನ್ನೊಬ್ಬರು ಸ್ನಾನ ಮಾಡುತ್ತಾರೆ. ಕೆಲವರು ಕತ್ತಲಾದ ಮೇಲೆ ಹೊರಗಡೆಯೇ ಸ್ನಾನ ಮಾಡುತ್ತಾರೆ,
- ಶೆಡ್ ಮನೆಗಳಲ್ಲಿ ವಿದ್ಯುತ್ ಸಮಸ್ಯೆಯಿದೆ. ಪಟ್ಟದಕಲ್ಲಿನ ಶಂಕರಲಿಂಗ ಕೆರೆಯ ಬಳಿ ಇರುವ ಸುಮಾರು 50ಕ್ಕೂ ಹೆಚ್ಚು ಮನೆಗಳಿಗೆ ಅಲ್ಲಲ್ಲಿ ಒಂದೆರಡು ದಾರಿದೀಪಗಳಿವೆ.
- ಈ ಪ್ರದೇಶಕ್ಕೆ ಬಸ್ ವ್ಯವಸ್ಥೆ ಸೂಕ್ತವಾಗಿಲ್ಲ. ಇದರಿಂದ ಶಾಲೆಗೆ ಹೋಗಲು ಕಷ್ಟವಾಗಿದೆ. ಪ್ರತಿದಿನ 4–5ಕಿ.ಮೀ. ನಡೆದುಕೊಂಡು ಹೋಗಿಬರಬೇಕು. ಇಲ್ಲವಾದಲ್ಲಿ ಬೆಳಿಗ್ಗೆ ಕೆಲಸಕ್ಕೆ ಹೋಗುವ ವಾಹನವಿರುವ ದೊಡ್ಡವರ ಜೊತೆಯಲ್ಲಿ ಹೋಗಬೇಕು. ಸಂಜೆ ಶಾಲೆಯಿಂದ ಹಿಂತಿರುಗಿ ಬರುವಾಗ ಕಷ್ಟವಾಗುತ್ತದೆ.

- ಈ ಪ್ರದೇಶವು ಕಾಡಿನ ಪಕ್ಕದಲ್ಲಿದೆ. ಊರಿನಿಂದ ಬಹಳ ದೂರವಿದೆ. ದಿನನಿತ್ಯ ಕೂಲಿ ಕೆಲಸಕ್ಕೆ, ಕೃಷಿ ಕೆಲಸಕ್ಕೆ, ಮಕ್ಕಳು ಶಾಲೆಗೆ, ಉದ್ಯೋಗ ನಿಮಿತ್ತ ಹೋಗುವವರು, ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ಹೋಗುವವರು ಎಲ್ಲರೂ ದಿನನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಈ ಪ್ರದೇಶಕ್ಕೆ ಯಾವುದೇ ರೀತಿಯ ಸಾರಿಗೆ ವ್ಯವಸ್ಥೆ ಇಲ್ಲ.
- ಪಟ್ಟದಕಲ್ಲಿನ ತಾತ್ಕಾಲಿಕ ಮನೆಗಳಿಗೆ ಗ್ರಾಮ ಪಂಚಾಯತ್ ನೀಡುತ್ತಿರುವ ನೀರಿನ ಪೂರೈಕೆ ಸುಮಾರು 15 ದಿನಗಳಿಂದ ಆಗುತ್ತಿಲ್ಲ. ಕಾರಣ ಕೇಳಿದರೆ ನೀರು ಪೂರೈಕೆಗೆ ಸಂಬಂಧಪಟ್ಟವರಿಂದ ಅನುದಾನ ಬಿಡುಗಡೆಯಾಗುತ್ತಿಲ್ಲ ಎಂದು ಮಾಹಿತಿ ನೀಡಿದ್ದಾರೆ.

**ಶಿಫಾರಸ್ಸುಗಳು:**

- ಆಶ್ರಯ ಮನೆಗಳಿರುವ ಕಡೆ, ತಾತ್ಕಾಲಿಕ ಮನೆಗಳಲ್ಲಿ ವಾಸವಾಗಿರುವ ಕಡೆ ಅಗತ್ಯ ಸಾರಿಗೆ ವ್ಯವಸ್ಥೆ, ನೀರು, ವಿದ್ಯುತ್ ಸಂಪರ್ಕ, ತಾತ್ಕಾಲಿಕ ತುರ್ತು ವೈದ್ಯಕೀಯ ವ್ಯವಸ್ಥೆಗಳನ್ನು ನೀಡುವಂತಾಗಬೇಕು.
- ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ವ್ಯವಸ್ಥೆಗಳನ್ನು ತಕ್ಷಣವೇ ಕಲ್ಪಿಸುವಂತಾಗಬೇಕು,
- ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ ಸೂಕ್ತ ಯೋಜನೆ ಸಿದ್ಧವಾಗಬೇಕು.

**ಸೇವೆಗಳು**

- ಸುಮಾರು 15 ದಿನದಿಂದ 2 ತಿಂಗಳಿನಷ್ಟು ಕಾಲ ಕೆಲವೊಂದು ಶಾಲೆಗಳಲ್ಲಿ ಪಾಠವೇ ನಡೆದಿಲ್ಲ.
- ಶಾಲೆಯೂ ಸಹ ಅರ್ಧದಷ್ಟು ನೀರಿನಲ್ಲಿ ಮುಳುಗಿತ್ತು. ಇದರಿಂದಾಗಿ, ಪುಸ್ತಕಗಳು, ಡೆಸ್ಕ್, ಬೆಂಚ್‌ಗಳು, ಫ್ಯಾನ್, ಸ್ಮಾರ್ಟ್ ಕ್ಲಾಸ್‌ನ ವಸ್ತುಗಳು, ಎಲ್ಲಾ ಹಾಳಾಗಿವೆ.
- ತಾತ್ಕಾಲಿಕ ಶಾಲೆ ಹಾಗೂ ಮನೆಯ ಹತ್ತಿರ ಶೌಚಾಲಯವಿಲ್ಲ. ಬಯಲು ಶೌಚವೇ ದಾರಿ. ತಾತ್ಕಾಲಿಕ ಮನೆಗಳ ಹತ್ತಿರ ಕಾಡು ಇದೆ. ಎಲ್ಲರೂ ಶೌಚಕ್ಕೆ ಅಲ್ಲಿಯೇ ಹೋಗುತ್ತಾರೆ. ಹೆಣ್ಣು ಮಕ್ಕಳಿಗೆ, ಮಹಿಳೆಯರಿಗೆ ಇದರಿಂದಾಗಿ ಅತ್ಯಂತ ಕಷ್ಟವಾಗುತ್ತಿದೆ.
- ಇಂತಹ ತಾತ್ಕಾಲಿಕ ಮನೆಗಳಿರುವ ಪ್ರದೇಶವು ಊರಿನಿಂದ ಬಹಳ ದೂರವಿದೆ. ದಿನನಿತ್ಯ ಕೂಲಿ ಕೆಲಸಕ್ಕೆ, ಕೃಷಿ ಕೆಲಸಕ್ಕೆ, ಮಕ್ಕಳು ಶಾಲೆಗೆ, ಉದ್ಯೋಗ ನಿಮಿತ್ತ ಹೋಗುವವರು, ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ಹೋಗುವವರು ಎಲ್ಲರೂ ದಿನನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಈ ಪ್ರದೇಶಕ್ಕೆ ಯಾವುದೇ ರೀತಿಯ ಸಾರಿಗೆ ವ್ಯವಸ್ಥೆ ಇಲ್ಲ. ಇವುಗಳಲ್ಲಿ ಬಹುತೇಕ ಶೆಡ್‌ಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಕೆಲವೊಂದು ಮನೆಗಳಿಗೆ ಸೋಲಾರ್ ದೀಪದ ವ್ಯವಸ್ಥೆ ಮಾಡಲಾಗಿದೆ.
- ನೆರೆ ನಿಂತ ನಂತರ ಮನೆಗಳಿಗೆ ಬಂದಾಗ ದಪ್ಪ ಕೆಸರು ತುಂಬಿತ್ತು. ಆ ಗಲೀಜಿನಿಂದ ಬಹಳ ಕೆಟ್ಟ ವಾಸನೆ ಬರುತ್ತಿತ್ತು. ಈಗಲೂ ಸಹ ಕೆಲವೊಂಧು ಪ್ರದೇಶಗಳು ಇನ್ನೂ ಸ್ವಚ್ಚವಾಗಿಲ್ಲ.

**ಶಿಫಾರಸ್ಸುಗಳು:**

- ಮಕ್ಕಳ ರಕ್ಷಣೆಗೆ, ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ವಿಶೇಷ ಕಾಳಜಿಯಿಂದ ತಕ್ಷಣದಲ್ಲಿ ಪರಿಹಾರ ಕ್ರಮಕ್ಕೆ ಯೋಜಿಸಬೇಕು.
- ಅಗತ್ಯವಿರುವಲ್ಲಿ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು.
- ತುರ್ತು ಸೇವೆಯ ಘಟಕಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕು. ಅಗತ್ಯ ಮಾಹಿತಿ ಕೇಂದ್ರಗಳನ್ನು ತೆರೆಯಬೇಕು.
- ಸಮುದಾಯದ ಸಹಭಾಗಿತ್ವದಲ್ಲಿ ಆರೋಗ್ಯ ಮಾಹಿತಿ, ಸಮುದಾಯ ಸ್ವಚ್ಛತೆ ಮುಂತಾದ ಕಾರ್ಯಗಳನ್ನು ನಡೆಸಬೇಕು

**ಇತರ ಸಮಸ್ಯೆಗಳು:**

- ಮಕ್ಕಳ ಗ್ರಾಮ ಸಭೆ, ಮಹಿಳಾ ಗ್ರಾಮ ಸಭೆಗಳು ಹಲವಾರು ಕಡೆ ನಡೆದೇ ಇಲ್ಲ. ಕೆಲವೆಡೆ ನಡೆಸಿದರೂ ಮಕ್ಕಳ ಮತ್ತು ಮಹಿಳೆಯರ ಭಾಗವಹಿಸುವಿಕೆಗೆ ಪರಿಣಾಮಕಾರಿ ಪ್ರಯತ್ನ ನಡೆಸದೇ ಗ್ರಾಮಸಭೆಗಳು ಅರ್ಥಪೂರ್ಣವಾಗಿ ನಡೆದಿಲ್ಲ.
- ಆರೋಗ್ಯ ಇಲಾಖೆಯಿಂದ ಕಿಶೋರಿಯರಿಗೆ ನೀಡುವಂತಹ ನ್ಯಾಪ್‌ಕಿನ್‌ಗಳು ನಿಯಮಿತವಾಗಿ ಪೂರೈಕೆ ಆಗುತ್ತಿಲ್ಲ.
- ಪ್ರವಾಹದ ಪರಿಸ್ಥಿತಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ ಮಕ್ಕಳ, ಮಹಿಳೆಯರ ಮೇಲೆ ಕೆಲವೆಡೆ ಬೆದರಿಸಿ, ಒತ್ತಡ ಹೇರಿದ್ದಾರೆ.
- ಬಾಲ್ಯವಿವಾಹದ ಸಮಸ್ಯೆ ಹಳ್ಳಿಗಳಲ್ಲಿ ಬಲವಾಗಿ ಬೇರೂರಿದೆ. ಈ ಕಾರಣಕ್ಕಾಗಿಯೇ ಹಲವಾರು ಹೆಣ್ಣೂಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.
- ಮನೆಯ ಆರ್ಥಿಕ ಪರಿಸ್ಥಿತಿ ಮಕ್ಕಳನ್ನು ದುಡಿಮೆಗೆ ದೂಡಿದೆ.

**ಶಿಫಾರಸ್ಸುಗಳು:**

- ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ಗ್ರಾಮ ಸಭೆ ಕಡ್ಡಾಯವಾಗಿ ನಡೆಯುವಂತೆ ಆಗಬೇಕು. ಅಲ್ಲದೇ ಈ ವೇದಿಕೆಗಳಲ್ಲಿ ಮಕ್ಕಳು ಮತ್ತು ಮಹಿಳೆಯರು ಅವರ ವಿಷಯಗಳನ್ನು ಗಂಭೀರವಾಗಿ ಚರ್ಚಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.

* ಬಾಲ್ಯವಿವಾಹ ನಡೆಯದಂತೆ ಪರಿಣಾಮಕಾರಿ ಜಾಗೃತಿ ಕಾರ್ಯಕ್ರಮಗಳು, ಕಾನೂನಿನ ಬಗ್ಗೆ ಸ್ಪಷ್ಟ ಮಾಹಿತಿಗಳನ್ನು ಪ್ರವಚಾರ ಮಾಡಿ ಜನರಲ್ಲಿ ಜಾಗೃತಿ ಮೂಡಿಸಬೇಕು
* ಮಕ್ಕಳ ಸ್ನೇಹಿ ಶಿಕ್ಷಣ ಪದ್ಧತಿ, ಕಲಿಕೆಯೊಂದಿಗೆ ದುಡಿಮೆ, ಹದಿಹರೆಯದವರಿಗೆ ವೃತ್ತಿ ತರಬೇತಿ ಯೋಜನೆಗಳು, ಕಾರ್ಯಕ್ರಮಗಳು ರೂಪಿತವಾಗಬೇಕು.

**ನಾವು ಗಮನಿಸಿರುವಂತೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಕೆಳಗಿನ ಕಾಯಿದೆಗಳು ಹಾಗೂ ನೀತಿಗಳು ವಿವಿಧ ಹಂತದಲ್ಲಿ, ವಿವಿಧ ರೂಪದಲ್ಲಿ ನಿರ್ಲಕ್ಷ್ಯವಾಗಿರುವುದಲ್ಲದೇ ಉಲ್ಲಂಘನೆಯಾಗುತ್ತಿವೆ.**

* **ರಾಷ್ಟ್ರೀಯ ವಿಕೋಪ ನಿರ್ವಹಣಾ ಕಾಯ್ದೆ:** ಈ ಕಾಯಿದೆಯ ಪ್ರಕಾರ ವಿಕೋಪಗಳ ದುಷ್ಪರಿಣಾಮ ಕಡಿಮೆ ಮಾಡುವಲ್ಲಿ ಸಹಕಾರಿಯಾಗಬಹುದಾದಂತಹ ಪೂರ್ವಮಾಹಿತಿಯನ್ನು ಸಮುದಾಯಕ್ಕೆ ತಲುಪಿಸುವಲ್ಲಿ ಆಡಳಿತ ವ್ಯವಸ್ಥೆ ಎಡವಿದೆ. ಅತ್ಯಂತ ಕಡೆಯ ಗಳಿಗೆಯಲ್ಲಿ ಜನರಿಗೆ ಮಾಹಿತಿ ನೀಡಿದ್ದರಿಂದ ಹಲವಾರು ಕಡೆ ಸಂಪೂರ್ಣವಾಗಿ ತಮ್ಮ ವಸ್ತು, ಪರಿಕರಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿಲ್ಲ. ವಿಕೋಪೋತ್ತರ ಪರಿಹಾರ ಕಾರ್ಯಗಳಲ್ಲಿಯೂ ಸಹ ಕಾಯಿದೆಯನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು ನ್ಯಾಯಯುತ, ಜನಪರ, ಪಾರದರ್ಶಕ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಲೋಪ–ದೋಷಗಳಾಗಿವೆ. ಅಲ್ಲದೇ, **ರಾಜ್ಯ ವಿಕೋಪ ನಿರ್ವಹಣಾ ಯೋಜನೆ, ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ 2016** ಇವೆಲ್ಲವೂಗಳ ಆಶಯಗಳೂ ಸಹ ಗಾಳಿಗೆ ತೂರಲ್ಪಟ್ಟಿವೆ.
* **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993**: ಈ ಕಾಯಿದೆಯು, ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಸೂಕ್ತ ಯೋಜನೆ ತಯಾರಿಸುವಲ್ಲಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವಲ್ಲಿ ಜನಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಗ್ರಾಮ ಸಭೆಯ ಹಕ್ಕು ಮತ್ತು ಅಧಿಕಾರವನ್ನು ಸ್ಪಷ್ಟಪಡಿಸುತ್ತದೆ. ಆದರೆ ಪರಿಹಾರ ಕಾರ್ಯ ಯೋಜಿಸುವಲ್ಲಿ, ಅನುಷ್ಠಾನಗೊಳಿಸುವಲ್ಲಿ, ಮೇಲ್ವಿಚಾರಣೆ ನಡೆಸುವಲ್ಲಿ ಗ್ರಾಮ ಸಭೆಯ ಪಾತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ.
* **ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ:** ಬದುಕುವ ಹಕ್ಕಿಗೆ ಆಧಾರವಾಗಿದ್ದ ಈ ಕಾಯಿದೆಯಲ್ಲಿರುವ ಪ್ರವಾಹ ನಿಯಂತ್ರಣ ಕುರಿತಾದ ಅಂಶಗಳನ್ನು ಎಲ್ಲಿಯೂ ಪರಿಗಣಿಸಲಾಗಿಲ್ಲ. ಅಲ್ಲದೇ ಪ್ರವಾಹದಿಂದುಂಟಾಗಿರುವ ದುಷ್ಪರಿಣಾಮಗಳಿಂದ ಬದುಕೇ ಕಳೆದುಕೊಂಡಿರುವಂತಹ ಪರಿಸ್ಥಿತಿ ಇರುವಾಗಲೂ ಈ ಕಾಯಿದೆಯ ಪೂರಕವಾಗಿರುವ ಅಂಶಗಳನ್ನು ಸಮರ್ಪಕವಾಗಿ ಯೋಜಿಸಿ ಅನುಷ್ಠಾನಗೊಳಿಸಿಲ್ಲ. ಅಲ್ಲದೇ ಪರಿಹಾರ ಕ್ರಮಗಳನ್ನು ಕೈಗೊಂಡಾಗಲೂ ಪೂರಕವಾಗಿರುವ ಭೂಮಿ ಅಭಿವೃದ್ಧಿ, ಜಲಸಂಪನ್ಮೂಲ ನಿರ್ವಹಣೆ ಮುಂತಾದ ಅಂಶಗಳನ್ನು ಪರಿಗಣಿಸಿ ಅವುಗಳಿಗೆ ಅನುಗುಣವಾಗಿ ಪರಿಹಾರ ಯೋಜನೆಗಳನ್ನು ಅಳವಡಿಸಿಲ್ಲ.
* **ರಾಷ್ಟ್ರೀಯ ಮಕ್ಕಳ ನೀತಿ, ರಾಜ್ಯ ಮಕ್ಕಳ ರಕ್ಷಣಾ ನೀತಿ, ಕರ್ನಾಟಕ ಶಾಲೆಗಳ ಮಕ್ಕಳ ರಕ್ಷಣಾ ಮಾಗದರ್ಶಿ:** ರಾಷ್ಟ್ರೀಯ ಮತ್ತು ರಾಜ್ಯ ಮಕ್ಕಳ ರಕ್ಷಣಾ ನೀತಿಗಳು ಈ ಇಡೀ ಪ್ರಕ್ರಿಯೆ, ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯಗೊಂಡಿವೆ. ವಸತಿ, ಶಿಕ್ಷಣ, ರಕ್ಷಣೆ, ಆಹಾರ ಹೀಗೆ ಎಲ್ಲಾ ವಿಷಯದಲ್ಲೂ ಮಕ್ಕಳ ರಕ್ಷಣಾ ನೀತಿಗಳು ಗಾಳಿಗೆ ತೂರಲ್ಪಟ್ಟಿವೆ.
* **ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ:** ಈ ಒಡಂಬಡಿಕೆಯು ಉಲ್ಲೇಖಿಸುವ ಮಕ್ಕಳ ಹಿತಾಸಕ್ತಿ, ಜೀವನ, ಬದುಕುವ ಹಾಗೂ ಬೆಳವಣಿಗೆಯ ಹಕ್ಕು, ಸಾಮಾಜಿಕ ಭದ್ರತೆ, ಸಾಕಷ್ಟು ಗುಣಮಟ್ಟದ ಬದುಕು ನಡೆಸುವ ಹೀಗೆ ವಿವಿಧ ವಿಧಿಗಳ ಉಲ್ಲಂಘನೆಯಾಗಿದೆ.

***ಈ ಎಲ್ಲಾ ವಿಷಯಗಳನ್ನು ಪರಿಗಣಿಸಿ ವಿಕೋಪ ನಿರ್ವಹಣಾ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆಯನ್ನು ಅತ್ಯಂತ ಶೀಘ್ರವಾಗಿ ರೂಪಿಸಿ, ನೆರೆಯಿಂದ ಸಂಕಷ್ಟಕ್ಕೊಳಗಾದ ಜಿಲ್ಲೆಯ ಎಲ್ಲಾ ಮಕ್ಕಳು ಹಾಗೂ ಕುಟುಂಬಗಳ ಅಗತ್ಯತೆಗಳಿಗೆ ಸ್ಪಂದಿಸಿ ಸಮಗ್ರ ಪರಿಹಾರ ಕ್ರಮಗಳನ್ನು ಜಾರಿಗೆ ತರಲೇಬೇಕು. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಾಗೂ ತುರ್ತು ಪರಿಹಾರ ಕ್ರಮಗಳನ್ನು ಎಲ್ಲಾ ಹಂತದ ಸರ್ಕಾರಗಳ ಜವಾಬ್ದಾರಿಯಿದ್ದು, ಆಯಾ ಹಂತದ ಸರ್ಕಾರಗಳು ಹಾಗೂ ಅಧಿಕಾರಿಗಳು ಶೀಘ್ರವಾಗಿ ಕಾರ್ಯಪ್ರವೃತ್ತರಾಗಬೇಕಾದ ಅನಿವಾರ್ಯತೆಯೂ ಇದೆ. ನೆರೆಯಿಂದ ಬದುಕು ಕಳೆದುಕೊಂಡವರ ಜೀವನವನ್ನು ಕಟ್ಟಲು ಈಗಾಗಲೇ ಆರಂಭಿಸಿರುವ ಕಾರ್ಯಗಳು ವೇಗವನ್ನು ಪಡೆದುಕೊಳ್ಳಬೇಕು ಹಾಗೂ ಆಗಲೇಬೇಕಾದ ಕಾರ್ಯಗಳ ಆರಂಭಕ್ಕೆ ಮೀನಮೇಷ ಎಣಿಸುತ್ತಿರುವುದನ್ನು ನಿಲ್ಲಿಸಿ ತಕ್ಷಣದಿಂದಲೇ ಕ್ರಮ ಕೈಗೊಳ್ಳಬೇಕು ಎನ್ನುವುದು ಮಕ್ಕಳ ಹಾಗೂ ಸಮುದಾಯದವರ ಪರವಾಗಿ ಹಕ್ಕೊತ್ತಾಯವಾಗಿದೆ.***

| | | |
|---|---|---|
| ಕೃಪಾ ಎಂ. ಎಂ. | ಮಹಾಂತೇಶ್ ಅಗಸಿಮುಂದನಿ | ಜಿ.ಎನ್. ಸಿಂಹ |
| ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ | ಬರ್ಡ್ಸ್ ಸಂಸ್ಥೆ | ರೀಚ್ ಸಂಸ್ಥೆ |

**ಹೆಚ್ಚಿನ ವಿವರಗಳಿಗಾಗಿ:**
ಕೃಪಾ ಎಂ. ಎಂ: 99453 75430